(ಇಂದು ದಿನಾಂಕಃ 29-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲುಃ 4 ರಿಂದ 7 ನೇ ಪ್ರತಿವಾದಿ ಪರ ಶ್ರೀ ಬಿ.ಎಸ್.ವಕೀಲರಿಂದಃ**

ನನ್ನ ತಾತನ ಹೆಸರು ಬಾಲಪ್ಪ. ಬಾಲಪ್ಪನಿಗೆ 3 ಜನ ಹೆಣ್ಣು ಮಕ್ಕಳು ಮತ್ತು ಒಬ್ಬ ಗಂಡು ಮಗ. ಬಾಲಪ್ಪನಿಗೆ ಜಟ್ಟೂರಿನಲ್ಲಿ ಮಾತ್ರ ಜಮೀನು ಇದ್ದವು. ಎರಡು ಸ.ನಂ. ಗಳಲ್ಲಿ ಜಮೀನುಗಳು ಇದ್ದವು. ಸ.ನಂ. 48 ಮತ್ತು 49 ರಲ್ಲಿ ಜಮೀನುಗಳು ಇದ್ದವು. ಸ.ನಂ. 48 ರಲ್ಲಿ 18 ಎಕರೆ 36 ಗುಂಟೆ ಜಮೀನು ಇತ್ತು. ಸ.ನಂ. 49 ರಲ್ಲಿ 6 ಎಕರೆ ಇತ್ತು. ಸ.ನಂ. 49 ರಲ್ಲಿ 20 ಎಕರೆ 32 ಗುಂಟೆ ಜಮೀನು ಇತ್ತು ಎಂದರೆ ಸರಿಯಲ್ಲ. ಉದ್ದೇಶಪೂರ್ವಕವಾಗಿ 2 ಎಕರೆ ಜಮೀನು ಬಿಟ್ಟು ಈ ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

ನನ್ನ ತಾಯಿ ತೀರಿಕೊಂಡು 8 ವರ್ಷ ಆಗಿದೆ. ನನ್ನ ತಾಯಿ ತೀರಿ ಹೋದ ಮೇಲೆ ನನ್ನ ಮದುವೆ ಆಗಿದೆ. ನನ್ನ ತಾಯಿಗೆ ಕ್ಯಾನ್ಸರ ರೋಗ ಇತ್ತು ಅದರಿಂದಾಗಿ ತೀರಿ ಹೋಗಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆಗೆ ಸ.ನಂ 48 ವತ್ತು 49 ರಲ್ಲಿನ ಜಮೀನುಗಳಿಂದ ಬರುತ್ತಿದ್ದ ಆದಾಯ ಬಿಟ್ಟು ಬೇರೆ ಆದಾಯ ಇರಲಿಲ್ಲ ಎಂದರೆ ಸರಿ. ನನ್ನ ತಂದೆಗೆ ಸಾಕಷ್ಟು ಅದಾಯ ಇರಲಿಲ್ಲ ಮತ್ತು ತಾಯಿಗೆ ಕ್ಯಾನ್ಸರ ಇತ್ತು ಕಾರಣ ಚಿಕಿತ್ಸೆ ಸಲುವಾಗಿ ನನ್ನ ತಂದೆ 4 ಮತ್ತು 5 ನೇ ಪ್ರತಿವಾದಿಯರಿಗೆ ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ಸ.ನಂ. 48/1 ರಲ್ಲಿ 3 ಎಕರೆ 28 ಗುಂಟೆ ಜಮೀನನ್ನು 1 ರಿಂದ 3 ನೇ ಪ್ರತಿವಾದಿಯರು ಸೇರಿ 5 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಖರೀದಿಹಣವನ್ನು ನನ್ನ ತಾಯಿಯ ಕ್ಯಾನ್ಸರ ಚಿಕಿತ್ಸೆಗೆ ಬಳಸಿದ್ದಾರೆ ಎಂದರೆ ಸರಿಯಲ್ಲ. ದಿನಾಂಕ 08-05-2015 ರಂದು ಖರೀದಿ ತೆಗೆದುಕೊಂಡ ದಿನದಿಂದ ಸದರಿ ಜಮೀನಿಗೆ 5 ನೇ ಪ್ರತಿವಾದಿ ಮಾಲೀಕಾರಾಗಿ ಕಬ್ಜಾದಲ್ಲಿ ಇದ್ದಾರು ಎಂದರೆ ನನಗೆಮಾರಾಟ ಮಾಡಿದ್ದು ಗೊತ್ತಿಲ್ಲ ಎಂದು ಹೇಳುತ್ತಾರೆ. ಸ.ನಂ. 48/4 ರಲ್ಲಿನ 2 ಎಕರೆ 26 ಗುಂಟೆ ಜಮೀನನ್ನು ನನ್ನ ತಾಯಿಯ ಆಸ್ಪತ್ರೆಯ ಖರ್ಚಿಗಾಗಿ 4 ನೇ ಪ್ರತಿವಾದಿಗೆ ದಿನಾಂಕ 05-07-2011 ರಂದು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ನಂತರ 4 ನೇ ಪ್ರತಿವಾದಿ ಸದರಿ ಜಮೀನನ್ನು 6 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ.

ದಿನಾಂಕ 14-09-2015 ರಂದು ಖರೀದಿ ಪತ್ರ ನೋಂದಣಿ ಆದಾಗಿನಿಂದ ಸದರಿ ಜಮೀನಿನಲ್ಲಿ 6ನೇ ಪ್ರತಿವಾದಿ ಕಬ್ಜಾದಲ್ಲಿ ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. 2015ರಲ್ಲಿ ಕಂದಾಯ ದಾಖಲಾತಿಗಳು 6ನೆ ೀಪ್ರತಿವಾದಿ ಹೆಸರಿಗೆ ಆದವು ಎಂದರೆ ನನಗೆ ಗೊತ್ತಿಲ್ಲ. 5ನೇ ಪ್ರತಿವಾದಿ ದಿನಾಂಕ 03-04-2017ರಂದು ತಾನು ಖರೀದಿ ಪಡೆದುಕೊಂಡಿದ್ದ ಜಮೀನನ್ನು 7ನೇ ಪ್ರತಿವಾದಿಗೆ ಮಾರಾಟ ಮಾಡಿದರು ಎಂದರೆ ನನಗೆ ಗೊತ್ತಿಲ್ಲ. ಅಂದಿನಿಂದ 7ನೇ ಪ್ರತಿವಾದಿ ಸದರಿ ಜಮೀನಿಗೆ ಮಾಲೀಕರಾಗಿ ಕಬ್ಜಾದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಅಂದಿನಿಂದ ಕಂದಾಯ ದಾಖಲಾತಿಗಳು ಅವರ ಹೆಸರಿನಲ್ಲಿ ಬರುತ್ತಿವೆ ಎಂದರೆ ಸರಿಯಲ್ಲ. 5ನೇ ಪ್ರತಿವಾದಿ 7ನೇ ಪ್ರತಿವಾದಿಗೆ ಬರೆದುಕೊಟ್ಟ ಖರೀದಿ ಪತ್ರಕ್ಕೆ 1ರಿಂದ 3ನೇ ಪ್ರತಿವಾದಿಯರು ಸಾಕ್ಷಿದಾರರಾಗಿ ಸಹಿ ಹಾಕಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ನನ್ನ ಮದುವೆ 2019 ರಲ್ಲಿ ಆಗಿದೆ. ಸಾಕ್ಷಿಗೆ ದಿನಾಂಕ 01-02-2016ರ ನೋಂದಾಯಿತ ಖರೀದಿ ಪತ್ರದ ದೃಢಿಕೃತ ನಕಲನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಖರೀದಿ ಪತ್ರವನ್ನು ನಿ.ಡಿ-1 ಎಂದು ಗುರುತಿಸಲಾಯಿತು. ನನ್ನ ಮದುವೆ ಕಾಲಕ್ಕೆ ನನ್ನ ಮದುವೆ ಖರ್ಚಿಗಾಗಿ ಹಣ ಬೇಕಾಗಿದ್ದರಿಂದ ನಿ.ಡಿ -1ರಂತೆ ಜಮೀನು ಮಾರಾಟ ಮಾಡಿದ್ದು ನಾನು ಸಬ್ ರಿಜಿಸ್ಟ್ರಾರ ಕಛೇರಿಗೆ ಹೋಗಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಸಾಲ ಪಡೆದುಕೊಂಡಿದ್ದೇವೆ ಎಂದು ಸಹಿ ಮಾಡಿದ್ದೇನೆ ಎಂದು ಹೇಳುತ್ತಾರೆ. ದಾವೆಯಲ್ಲಿ ದಿನಾಂಕ 01-02-2016ರ ಕ್ರಯ ಪತ್ರ ನನಗೆ ಸಂಬಂಧ ಪಡುವುದಿಲ್ಲ ಎಂದು ಹೇಳಿ ಬರೆಸಿದ್ದೇನೆ. ನಾನು ನನ್ನ ದಾವೆಯಲ್ಲಿ 6ನೇ ಪ್ರತಿವಾದಿಯಿಂದ ಸಾಲ ಪಡೆದುಕೊಂಡಿದ್ದೆವು ಅದಕ್ಕಾಗಿ ಭದ್ರತೆಗೆಂದು ದಾಖಲಾತಿ ಬರೆದುಕೊಟ್ಟಿದ್ದೇವೆ ಎಂದು ಹೇಳಿ ಬರೆಸಿಲ್ಲ. ಕುಟುಬಂದ ಅವಶ್ಯಕತೆಗಾಗಿ ನನ್ನ ತಂದೆ ಜಮೀನು ಮಾರಾಟ ಮಾಡಿದ್ದು ಕಾರಣ ಸಾಲದ ಸಂಗತಿಯನ್ನು ವಾದ ಪತ್ರದಲ್ಲಿ ಹೇಳಿ ಬರೆಸಿಲ್ಲ ಎಂದರೆ ಸರಿಯಲ್ಲ.

ಸ.ನಂ. 48 ರಲ್ಲಿ ನನ್ನ ತಂದೆಗೆ 16 ಎಕರೆ ಜಮೀನು ಇತ್ತು ಎಂದರೆ ಸರಿಯಲ್ಲ. ನನ್ನ ತಂದೆ ಸ.ನಂ 48/2 ರಲ್ಲಿ 5 ಎಕರೆ ಜಮೀನನ್ನು ನಾಗಪ್ಪ ತಂದೆ ಸಾಯಪ್ಪ ಜಟ್ಟೂರು ರರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಸ.ನಂ. 48/3 ರಲ್ಲಿ 5 ಎಕರೆ ಜಮೀನನ್ನು ನನ್ನ ತಂದೆ ಶಂಕ್ರಪ್ಪ ತಂದೆ ಈರಪ್ಪ ರವರಿಗೆ ಮಾರಾಟ ಮಾಡಿದಾರೆ ಎಂದರೆ ಸರಿಯಲ್ಲ. ಉದ್ದೇಶಪೂರ್ವಕಾವಾಗಿ ನಾನು ಶಂಕ್ರಪ್ಪ ಮತ್ತು ನಾಗಪ್ಪರವರಿಗೆ ಮಾರಾಟ ಮಾಡಿದಜಮೀನುಗಳನ್ನು ಬಿಟ್ಟು 3ರಿಂದ 7ನೇ ಪ್ರತಿವಾದಿಯರಿಗೆ ತೊಂದರೆ ಕೊಡುವ

ಸಲುವಾಗಿ ಅವರಿಗೆ ಮಾರಾಟ ಮಾಡಿದ ಜಮೀನುಗಳಳಿಗೆ ಮಾತ್ರ ಸುಳ್ಳು ದಾವೆಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನಾಗಪ್ಪ ಮತ್ತು ಶಂಕ್ರಪ್ಪರವರಿಗೆ ನಾನು ಚಿಕ್ಕವಳಿದ್ದಾಗೆ ಜಮೀನು ಮಾರಾಟ ಮಾಡಿದ್ದಾರೆ ಎಂದು ಹೇಳುತ್ತಾರೆ. ನಾನು ಚಿಕ್ಕವಳು ಇದ್ದಾಗಿನಿಂದ ನನ್ನ ತಂದೆಯ ಕುಟುಂದ ಆರ್ಥಿಕ ಪರಿಸ್ಥಿತಿ ಚೆನ್ನಾಗಿರಲಿಲ್ಲ ಎಂದರೆ ಸರಿಯಲ್ಲ. ಆರ್ಥಿಕ ಸ್ಥಿತಿ  ಚೆನ್ನಾಗಿ ಇಲ್ಲದ ಕಾರಣ ನನ್ನ ತಂದೆ ಶಂಕ್ರಪ್ಪ ಮತ್ತು ನಾಗಪ್ಪರವರಿಗೆ ಜಮೀನು ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ತದ ನಂತರ ನನ್ನ ತಾಯಿಗೆ ಕ್ಯಾನ್ಸರ ಖಾಯಿಲೆ ಬಂದ ಕಾರಣ ಕುಟುಂಬದ ಆರ್ಥಿಕ ಪರಿಸ್ಥಿತಿ ಮತ್ತಷ್ಟು ಬಲಹೀನ ಆದಾಗ ನನ್ನ ತಂದೆ ಜಮೀನನ್ನು 4 ಮತ್ತು 5 ನೇ ಪ್ರತಿವಾದಿಯರಿಗೆ ಮಾರಾಟ ಮಾಡಿದರು ಎಂದರೆ ಸರಿಯಲ್ಲ. 4 ಮತ್ತು 5 ನೇ ಪ್ರತಿವಾದಿಯರು ಸದರಿ ಜಮೀನುಗಳನ್ನು 6 ಮತ್ತು 7 ನೇ ಪ್ರತಿವಾದಿಯರಿಗೆ ಮಾರಾಟ ಮಾಡಿದರು ಎಂದರೆ ನನಗೆ ಗೊತ್ತಿಲ್ಲ.

5 ನೇ ಪ್ರತಿವಾದಿ ಖರೀದಿ ಪಡೆದುಕೊಂಡಿದ್ದ ಜಮೀನು ಸಂಬಂಧ ಪಹಣಿ ವರ್ಗಾವಣೆಯ ಸಲುವಾಗಿ ಸ್ವಲ್ಪ ದಿನಗಳ ಕಾಲ ತಕರಾರು ನಡೆದಿತ್ತು ಎಂದರೆ ಸರಿಯಲ್ಲ. ದಿನಾಂಕ 22-08-2016 ರಂದು ಉಪ ವಿಭಾಗ ಅಧಿಕಾರಿಗಳ ಆದೇಶದ ಪ್ರಕಾರ ಜಮೀನು 5 ನೇ ಪ್ರತಿವಾದಿ ಹೆಸರಿಗೆ ವರ್ಗಾವಣೆ ಆಯಿತು ಎಂದರೆ ಸರಿಯಲ್ಲ. ನನ್ನ ತಂದೆ 4 ಮತ್ತು 5 ನೇ ಪ್ರತಿವಾದಿಯರಿಗೆ ಜಮೀನು ಮಾರಾಟ ಮಾಡಿದ ನಂತರ 4 ಮತ್ತು 5 ನೇ ಪ್ರತಿವಾದಿ ಜಮೀನುಗಳ ಮಾಲೀಕರಾಗಿ ಕಬ್ಜಾದಲ್ಲಿ ಇದ್ದರು ತದನಂತರ ಅವರು ಜಮೀನುಗಳನ್ನು 6 ಮತ್ತು 7 ನೇ ಪ್ರತಿವಾದಿಯರಿಗೆ ಮಾರಾಟ ಮಾಡಿದ್ದು ಅಂದಿನಿಂದ 6 ಮತ್ತು 7 ನೇ ಪ್ರತಿವಾದಿಯರು ಮಾಲೀಕರಾಗಿ ಕಬ್ಜದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಸ.ನಂ. 49 ರಲ್ಲಿ 2 ಎಕರೆ ಜಮೀನು ಇವತ್ತಿಗೂ  ನನ್ನ ತಾತ ಬಾಳಪ್ಪನ ಹೆಸರಿನಲ್ಲಿದ್ದು ಸದರಿ ಜಮೀನನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ನನ್ನ ಕುಟುಂಬಕ್ಕೆ ಮುಂಚಿನಿಂದ ಆರ್ಥಿಕ ತೊಂದರೆ ಇದ್ದ ಕಾರಣ ನನ್ನ ತಂದೆ ಜಮೀನು ಮಾರಾಟ ಮಾಡುತ್ತಾ ಬಂದಿದ್ದಾರೆ ಎಂದರೆ ಸರಿಯಲ್ಲ. ನನ್ನ ತಾಯಿಯ ಅನಾರೋಗ್ಯದ ಖರ್ಚಿಗಾಗಿ ಮತ್ತು ನನ್ನ ಮದುವೆ ಖರ್ಚಿಗಾಗಿ ನನ್ನ ತಂದೆ ಜಮೀನು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಈ ಎಲ್ಲಾ ಸಂಗತಿಗಳು ಗೊತ್ತಿದ್ದರೂ ಕೂಡ ನಾನು ಮತ್ತು 1 ರಿಂದ 3 ನೇ ಪ್ರತಿವಾದಿಯರು ಪರಸ್ಪರ ಸೇರಿಕಾಗಿ 4 ರಿಂದ 7 ನೇ ಪ್ರತಿವಾದಿಯರ ವಿರುದ್ದ

ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.